ಬಂದಾಗ ಅವರಿವರ ಪಂಚೆಯಡಿ ಅವಿತಿಟ್ಟುಕೊಳ್ಳುತ್ತ ಹಿಂದೆ ಮುಂದೆ ಜರುಗುತ್ತಿದ್ದ. ಸೊರಬದಲ್ಲಿಳಿದವನಿಗೆ ಮತ್ತೆ ಹೊರಡಲು ಸಿದ್ಧವಾಗಿದ್ದ ಬೇರೊಂದು ಬಸ್ಸು ಕಂಡದ್ದೇ ಹತ್ತಿಯೇ ಬಿಟ್ಟ. ಸಿಟಿ ದಾಟಿ ಅರ್ಧ ಮುಕ್ಕಾಲು ಗಂಟೆಯಲ್ಲಿಯೇ ಭಾಡ್ ಎನ್ನುವ ಸದ್ದು ಕೇಳಿಸಿತು. ತನ್ನ ಮೇಲೆ ಯಾರ್ ಯಾರೋ ಉರುಳಿಬಿದ್ದು ತಾನು ನುಜ್ಜುಗುಜ್ಜಾದ ಹಾಗೆ... ಅಷ್ಟೆ. ಮುಂದಾದದ್ದೇನೂ ತಿಳಿಯಲಿಲ್ಲ.

ಮತ್ತೆ ಎಚ್ಚರವಾದದ್ದು ಕೈಕಾಲಿಗೆ, ತಲೆಗೆ ಬ್ಯಾಂಡೇಜು ಸುತ್ತಿಕೊಂಡು ಶಿವಮೊಗ್ಗಾದ ಮೆಗ್ಗಾನ್ ಆಸ್ಪತ್ರೆಯ ಬೆಡ್ಡಿನ ಮೇಲೆ ಇದ್ದಾಗಷ್ಟೆ. ಅಮ್ಮ ಅಜ್ಜಿಯ ನೆನಪು ಹೆಚ್ಚಾಗಿ ಅಳತೊಡಗಿದವನನ್ನು ಸಂತೈಸಲು ಬಂದ ನರ್ಸುಗಳು ಸೋತು ಹಿಂದಿರುಗಿದರು. ಆಗ ಇದೇ ರಾಮಣ್ಣ, ಪಕ್ಕದ ಬೆಡ್ಡಿನ ಪಕ್ಕ ಕುಳಿತವನು ಎದ್ದು ಬಂದಿದ್ದ. ಅವನ ಷಡ್ಡಕನೋ ಯಾರೋ ಅದೇ ಬಸ್ಸಿನಲ್ಲಿದ್ದರು ಎನ್ನುವುದು ಆಮೇಲೆ ತಿಳಿದ ವಿಷಯ. ಬಳಿ ಬಂದವನೆ ನಿಧಾನವಾಗಿ ಹುಡುಗನ ತಲೆ ನೇವರಿಸಿ ಅಪ್ಪ ಮಾಡುವ ಹಾಗೆ ತನಗೆ ಜ್ವರ ಬಂದಾಗ ಅಪ್ಪನೂ ಇದೇ ರೀತಿ ತನ್ನ ತಲೆ ಸವರಿ ತಣ್ಣೀರು ಬಟ್ಟೆ ಹಾಕುತ್ತಿದ್ದ. ಕಣ್ಣು ಮುಚ್ಚಿದರೆ ಬಾಯಿ ತೆರೆದು ನುಂಗಲು ಬರುತ್ತಿದ್ದ ರಾಕ್ಷಸನನ್ನು ತಾನು ಹೊಡೆದೋಡಿಸುತ್ತೇನೆ ಎನ್ನುತ್ತ ತನ್ನ ತಲೆ ತಟ್ಟಿ ಮಲಗಿಸುತ್ತಿದ್ದ. ಅಂಥಾ ಅಪ್ಪನ ಮಾತು ಕೇಳದೆ ತಪ್ಪು ಮಾಡಿದ್ದಕ್ಕೆ ದೇವರೆ ಈ ಶಿಕ್ಷೆ ಕೊಟ್ಟನೆ... 'ಯಾರಪ್ಪ ನೀನು, ಯಾವ ಊರು ನಿನ್ನ ಅಪ್ಪ ಅಮ್ಮ ಎಲ್ಲಿದ್ದಾರೆ ಹೇಳು ಮಗು, ನಾನು ನಿನ್ನನ್ನು ಮನೆಗೆ ಬಿಟ್ಟು ಬರುತ್ತೇನೆ' ಎಂದು ಆಪ್ತವಾಗಿ ಕೇಳಿದ್ದ. ತಟ್ಟನೆ ಮಲ್ಲಾರಿ ಮಾಸ್ತರು, ಅಪ್ಪನ ಉಡದ ಹಿಡಿತ ಎಲ್ಲ ನೆನಪಿಗೆ ಬಂದು ಮನಸ್ಸು ಧಿಕ್ಕಾರ ಕೂಗಿದ್ದೆ, 'ನನಗೆ ಯಾರೂ ಇಲ್ಲ. ಊರು...' ಯಾವುದೋ ಊರ ಹೆಸರು ಹೇಳುವ ಎಂದು ಪುಸ್ತಕದಲ್ಲಿ ಬರುವ ಊರ ಹೆಸರು ನೆನಪು ಮಾಡಿಕೊಳ್ಳಲೆತ್ನಿಸಿದ. ಊಹುಂ, ಏನೂ ನೆನಪಿಗೆ ಬರದೆ ಸುಮ್ಮನೆ ತಲೆಯಾಡಿಸಿದ ಹುಡುಗನಿಗೆ ಮಾತು ಬರೋಲ್ಲವೋ ಅಥವಾ ಆದ ಅಪಘಾತಕ್ಕೆ ನೆನಪಿನ ಶಕ್ತಿ ಹೋಗಿಬಿಟ್ಟಿದೆಯೋ ಎಂದು ರಾಮಣ್ಣನಿಗೇ ಸಂದೇಹ ಬರುವಂತೆ. ಇದ್ದಕ್ಕಿದ್ದಂತೆ ಗಂಟಲೊಣಗಿ 'ನೀರು, ನೀರು ಬೇಕು ನೀರು' ಎಂದ. ತನ್ನ ಮೊದಲ ಶಂಕೆ ತಪ್ಪು, ಹುಡುಗನಿಗೆ ಮಾತು ಬರುತ್ತೆ ಎಂದು ನಿರಾಳವಾದ ರಾಮಣ್ಣ.

ಅಲ್ಲಿಂದ ಸೀದಾ ಬಂದದ್ದೆ ಸಿರಿಪುರದ ಈ ರಾಮಣ್ಣನ ಮನೆಗೆ.

★★★

'ಎಷ್ಟೊಂದು ವರ್ಷಗಳ ನಂತರವೂ ನೆನಪಿಟ್ಟುಕೊಂಡು ಬಂದು ಕಂಡೆಯಲ್ಲಪ್ಪ, ದೇವರು ನಿನಗೆ ಒಳ್ಳೇದು ಮಾಡಲಿ' ಎಂದು ರಾಮಣ್ಣ ಮನತುಂಬಿ ಹರಸಿದ. 'ಯಾಕೆ ರಾಮಣ್ಣ, ಈ ವಯಸ್ಸಿನಲ್ಲೂ ನೀನೊಬ್ಬನೇ ಗುದ್ದಾಡ್ತ ಇದೀಯಲ್ಲ, ನಾನು ಹೋಗುವಾಗ ನಿನಗೆ ಒಂದು ಪಾಪೂನು ಇತ್ತಲ್ಲ ಈಗ ಕಾಲೇಜೂ ಮುಗಿಸಿರಬಹುದು ಎಂದುಕೊಂಡಿದ್ದೆ. ನೌಕರಿ ಏನಾದರು ಸಿಕ್ತಾ ಹೇಗೆ?' ಎಂದೆ. ನಾನು ಹೋಗುವಾಗ ರಾಮಣ್ಣನ ಮಗನಿನ್ನು ಒಂದು ವರ್ಷದ ಕೂಸು. ನಾನೂ ಅವನನ್ನ ಎತ್ತಿ ಆಡಿಸಿದವನೇ. ಆ ಕೂಸಿನ ತೊದಲು ಮಾತುಗಳು ನನಗರ್ಥವಾದಷ್ಟು ಅದರ ಅಪ್ಪ ಅಮ್ಮನಿಗು ಅರ್ಥವಾಗುತ್ತಿರಲಿಲ್ಲ. ರಾಮಣ್ಣನ ಕಣ್ಣು ಹನಿಗೂಡಿತು. 'ಕೊಟ್ಟ ದೇವರೇ ಅವನನ್ನು ಕಸಿದುಕೊಂಡುಬಿಟ್ಟನಪ್ಪ. ಅವನನ್ನು ಉಳಿಸಿಕೊಳ್ಳುವ ಅದೃಷ್ಟ ನಮಗಿರಲಿಲ್ಲವೋ ಅವನ ಆಯುಷ್ಯವೇ ಅಷ್ಟಿತ್ತೋ... ಎಲ್ಲಾ ದೇವರಿಚ್ಛೆ... ಅವನು ಐದು ವರ್ಷದವನಿದ್ದಾಗಿನ ಘಟನೆ. ನನ್ನೊಡನೆಯೇ ಹೊಟೇಲಿಗೆ ಬಂದಿದ್ದ. ನಾನು ಒಳಗೇನೋ ಮಾಡ್ತಾ ಇದ್ದೆ. ಅದು ಯಾವ ಕ್ಷಣದಲ್ಲಿ ಹೊರಗೋಡಿದ್ದನೋ –ರಸ್ತೆಯಲ್ಲಿ ಜೋರಾಗಿ